# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ</u>

# <u>ಬಳ್ಳಾರಿ</u>

## <u>ಸತ್ರ ಮೊಕದ್ದಮೆ ಸಂಖ್ಯೆಃ34/2025</u>

**<u>ಪಿ.ಡಬ್ಲ್ಯೂಃ 6(ಸಿಡಬ್ಲ್ಯೂಃ 20)</u>**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ಅನಿಲ್ ಕುಮಾರ್** |
| **ತಂದೆಯ ಹೆಸರು** | : | **ಯಲ್ಲಪ್ಪ** |
| **ವಯಸ್ಸು** | : | **30 ವರ್ಷ** |
| **ಕೆಲಸ** | : | **ಅಸಿಸ್ಟೆಂಟ್ ಇಂಜಿನಿಯರ್ , ಪಿಡಬ್ಳ್ಯುಡಿ ,ಸಿರುಗುಪ್ಪ** |
| **ವಾಸ ಸ್ಥಳ** | : | **ಸಿರುಗುಪ್ಪ** |

**<u>ಸಾಕ್ಷಿಯನ್ನು ದಿನಾಂಕ 09.01.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ನಾನು ದಿಃ16.9.2023 ರಿಂದ ಈವರೆಗೆ ಸಿರುಗುಪ್ಪ ಪಿಡಬ್ಲ್ಯುಡಿ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

**2.** ಹಚ್ಚೊಳ್ಳಿ ಪೊಲೀಸ್ ಠಾಣೆ ತನಿಖಾಧಿಕಾರಿ ನನಗೆ ದಿಃ3.3.2025 ರಂದು ಪತ್ರ ಬರೆದು ಗಲಾಟೆ ನಡೆದ ಸ್ಥಳ ಮೂಕಮ್ಮಳ ಮನೆಯ ಹತ್ತಿರ ನಕಾಶೆಯನ್ನು ತಯಾರಿಸಿ ಕೊಡುವಂತೆ ಕೋರಿಕೊಂಡಿದ್ದರು. ಅದರಂತೆ ಪೊಲೀಸ್ ಸಿಬ್ಬಂದಿ ಘನಮೂರ್ತಿ ರವರು ತೋರಿಸಿದ ಸ್ಥಳದಲ್ಲಿ ಕಚ್ಚಾ ನಕ್ಷೆ ತಯಾರಿಸಿದ್ದೇನೆ. ಕಚ್ಚಾ ನಕ್ಷೆಯನ್ನು **ನಿಪಿ.12** ಎಂದು ಸಾಕ್ಷಿಯ ಸಹಿಯನ್ನು **ನಿಪಿ.12 ಎ** ಎಂದು ಗುರುತಿಸಲಾಯಿತು.

**S.C.No. 34/2025**
**P.W. 6 (C.W.20 )**
**Date : 09.01.2026**

**ಪಾಟೀಸವಾಲುಃ ಆರೋಪಿ ಪರ ಶ್ರೀಮತಿ ಹೆಚ್.ಆರ್.ಜೆ. (ಎಲ್.ಎ.ಡಿ.ಸಿ) ವಕೀಲರಿಂದ:**

**2.** ದಿಃ1.4.2025 ರಂದು ನನಗೆ ಸ್ಥಳವನ್ನು ತೋರಿಸಿದ್ದಾರೆ. ನಾನು ಸ್ಥಳದ ಅಳತೆ ಮಾಡಿಲ್ಲ. ನಕ್ಷೆಯಲ್ಲಿ ಕೃತ್ಯ ನಡೆದ ಸ್ಥಳದಿಂದ ಮೂಕಮ್ಮಳ ಮನೆಗೆ ಎಷ್ಟು ದೂರ ಇದೆ ಎಂದು ಹೇಳಿಲ್ಲ. ಮೂಕಮ್ಮಳ ಮನೆಯ ಎದುರುಗಡೆ ಕೃತ್ಯ ನಡೆದಿದೆ. ನಾನು ಸ್ಥಳಕ್ಕೆ ಬೇಟಿ ನೀಡದೆ ನಕ್ಷೆ ತಯಾರಿಸಿದ್ದೇನೆ ಎನ್ನುವುದು ಸರಿಯಲ್ಲ. ಸ್ಥಳ ತೋರಿಸಿದ ವ್ಯಕ್ತಿಯ ಸಹಿಯನ್ನು ನಾನು ನಕಾಶೆಯಲ್ಲಿ ಪಡೆದುಕೊಂಡಿಲ್ಲ.

**ಮರು-ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

**ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**